SRUJANI
ISSN: 2583-3510
Indian Journal of Innovative Research and Development (SIJIRD)
Volume-1 (02), May-June 2022, Pp. 19-23
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಚಿಂಚೋಳಿ ತಾಲೂಕಿನ ತತ್ವಪದಕಾರರು

**ಡಾ. ಸಿದ್ಧಲಿಂಗಪ್ಪ ಎಸ್ ದೇಶ್‌ಮುಖ್***
*ಕನ್ನಡ ಸಹಾಯಕ ಪ್ರಾಧ್ಯಾಪಕರು, ಸೇಂಟ್ ಕ್ಲಾರೆಟ್ ಕಾಲೇಜು, ಬೆಂಗಳೂರು.

***Abstract:***

ಯಾವುದನ್ನು ಒಂದೆರೆಡು ಶತಮಾನಗಳ ಕಾಲ ಕನ್ನಡ ಸಾಹಿತ್ಯ ಚರಿತ್ರೆಕಾರರು ಕತ್ತಲೆ ಯುಗಗಳೆಂದು ಕರೆದರೋ ಅಂತಹ ಕತ್ತಲೆ ಯುಗಗಳ ಬಯಲಲ್ಲೇ ಹುಟ್ಟಿಕೊಂಡ ಮಹಾಬೆಳಕಿನ ವಜ್ರ ಜಲಪಾತ ಧಾರೆಗಳೇ ತತ್ವಪದಗಳು. ಅಂತೆಯೇ ಇವತ್ತಿಗೂ ಅಮವಾಸ್ಯೆಯ ಕತ್ತಲು, ಹೆಣದ ಸಾನಿಧ್ಯ, ಊರಾಚೆಯ ಗವಿ, ಗುಡಿ, ಗುಂಡಾರ, ಗುಡಿಸಲು, ಗುಂಪಾ, ಕೊಂಪೆಗಳಲ್ಲಿ ಅನುರಣಿಸುವ ಹಾಡುಗಬ್ಬಗಳೇ ತತ್ವಪದಗಳು. ಪ್ರಸ್ತುತ ಲೇಖನದಲ್ಲಿ ಚಿಂಚೋಳಿ ತಾಲೂಕಿನ ತತ್ವಪದಕಾರರನ್ನು ಕುರಿತು ವಿವೇಚಿಸಲಾಗಿದೆ.

***Key Words:*** ಕನ್ನಡ ಸಾಹಿತ್ಯ, ಕಲಬುರ್ಗಿ, ಚಿಂಚೋಳಿ, ಜೀವನಾನುಭವ, ತತ್ವಪದ.

**ಪೀಠಿಕೆ**

ತತ್ವಪದಗಳು ಏಕಾಂತ ಮತ್ತು ಲೋಕಾಂತಗಳೆರಡರಲ್ಲೂ ಪ್ರಸ್ತುತಗೊಳ್ಳುವ ಗಾಯನ ಪ್ರಸ್ಥಾನಗಳು. ಹೀಗೆ ಕತ್ತಲೆ ಯುಗದಲ್ಲಿ ಜನ್ಮತಾಳಿದ ತತ್ವಪದ ಸಾಹಿತ್ಯಕ್ಕೂ ಮತ್ತು ಮಡಿವಂತ ಮನಸುಗಳು ಅಶುಭ, ಅಮಂಗಳವೆಂದು ಭಾವಿಸಲಾಗುವ ಹೆಣ, ಸಾವು, ಅಮವಾಸ್ಯೆಯ ಕತ್ತಲೆಗೂ ಅವಿನಾಭಾವ ಸಂಬಂಧ. ಇವತ್ತಿಗೂ ತತ್ವಪದಗಳು ಯಥೇಚ್ಛವಾಗಿ ಬದುಕಿರುವ, ಕೇಳಿಬರುವ ಸಂದರ್ಭೋಚಿತ ಸಮಯ ಮತ್ತು ಜಾಗಗಳವು. ಗುರುಪುತ್ರ, ಪುತ್ರಿಯರು ಇಲ್ಲವೇ ಗುರು– ಶಿಶು ಮಕ್ಕಳು ತಮ್ಮ ಅಂತರಂಗದ ಸಮಕ್ಷಮದಲ್ಲಿ ತನ್ನ ತಾನರಿವ, ತಾನೇ ತಾನಾಗಿ, ತಾನೆರಡೊಂದಾಗಿ ಜನ್ಮತಾಳುವ ಗದ್ಯಗೀತೆಗಳೇ ತತ್ವಪದ ಸಾಹಿತ್ಯ.

**ಐನೂಲಿ ಕರಿಬಸವಾಚಾರ್ಯರು**

ಕವಿ ಕರಿಬಸವಾಚಾರ್ಯರು ಚಿಂಚೋಳಿ ತಾಲೂಕಿನ ಐನೂಲಿ ಗ್ರಾಮದವರು ವೀರಶೈವ ಕುಟುಂಬದವರಾದ ಶ್ರೀಮತಿ ಗಿರಿಜಾದೇವಿ, ಶ್ರೀ ಶತಾನಂದ ಮೂರ್ತಿ ಇವರ ಮಗನಾಗಿ ಜನಿಸಿದರು. ಇವರ ಕಾಲವನ್ನು ಕ್ರಿ.ಶ. 1745 ರಿಂದ 1840 ಎಂದು ಗುರುತಿಸಲಾಗಿದೆ. ಕರಿಬಸವಾಚಾರ್ಯರು 25 ವರ್ಷದವರಾಗುವವರೆಗೂ ದನ ಕಾಯುತ್ತಿದ್ದರು. ಗ್ರಾಮಕ್ಕೆ ಸ್ವಲ್ಪವೇ ದೂರದಲ್ಲಿರುವ ಉಮಾಚಲ ಬೆಟ್ಟಕ್ಕೆ ದನಗಳನ್ನು ಮೇಯಿಸಲು ಹೋಗಿ, ದನ ಮೇಯಿಸುವದನ್ನು ಬಿಟ್ಟು ದೇವರ ಗುಡಿಯೊಂದರಲ್ಲಿ ಧ್ಯಾನ ಮಾಡುತ್ತಿದ್ದರು.

"ಕುರಿತೋದದಯಂ ಕಾವ್ಯ ಪರಿಣಿತ ಮತಿಗಳ್" ಎಂಬ ಕವಿರಾಜ ಮಾರ್ಗಕಾರನ ನುಡಿಯಂತೆ ಐನೂಲಿಯ ಕರಿಬಸವಾಚಾರ್ಯರು ವಿಶೇಷವಾಗಿ ಓದನ್ನು ಓದದೇ ಸ್ವ ಅನುಭವದಿಂದ ಕಾವ್ಯಗಳನ್ನು ರಚಿಸಿದರು. 25ನೇ ವಯಸ್ಸಿನಲ್ಲಿ ಅಕ್ಷರಾಭ್ಯಾಸ ಕಲಿತರು. ಮುಂದೆ ದನ ಕಾಯುವದನ್ನು ತೊರೆದು ಅಕ್ಷರ ಅಭ್ಯಾಸಕ್ಕಾಗಿ ಸುಲೇಪೇಟ್ ಮಠಕ್ಕೆ ಬಂದು ಅಲ್ಲಿ ಶ್ರೀಗಳ ಆಶ್ರಯದಲ್ಲಿ ಅಕ್ಷರ ಕಲಿತು ಬಹು ಭಾಷಾ ಪಂಡಿತರಾದರು. ಬಹುಮುಖ ಪಂಡಿತರಾದ ಕರಿಬಸವಾಚಾರ್ಯರು 25ಕ್ಕೂ ಹೆಚ್ಚು ವಿಭಿನ್ನವಾದ ಕೃತಿಗಳನ್ನು ರಚಿಸಿದ್ದಾರೆ. "ಕವೀಂದ್ರ ಶಾಬಕ" ಎಂಬುದು ಇವರ ಕಾವ್ಯನಾಮವಾಗಿತ್ತು.

ಈ ಜಿಲ್ಲೆಯ ಪ್ರಮುಖ ತತ್ವಪದಕಾರರಲ್ಲಿ ಒಬ್ಬರಾದ ಕರಿಬಸವಾಚಾರ್ಯರು ತ್ರಿಮುಖವಾದ ಕವಿ ಪ್ರತಿಭೆ. ಈತ ಅನುಭಾವಿ ಕವಿ ಅಷ್ಟೇ ಅಲ್ಲದೇ, ಜನಪದ ಕವಿಯೂ ಹೌದು, ಪಂಡಿತ ಕವಿಯು ಹೌದು. ಚಂದನಕ್ಕೆ

*Please cite this article as:* ಸಿದ್ಧಲಿಂಗಪ್ಪ ಎಸ್ ದೇಶ್‌ಮುಖ್. (2022). ಚಿಂಚೋಳಿ ತಾಲೂಕಿನ ತತ್ವಪದಕಾರರು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(2), 19–23.

ಕುಂದಣವಿಟ್ಟ ಹಾಗೇ ಈತನ ಪ್ರತಿಭೆ, ಪಾಂಡಿತ್ಯವೂ ಬೆಳೆಯುತ್ತ ಹೋದಂತೆ ತನ್ನ ಕಾಲದಲ್ಲಿ ಹಾಗೂ ತನಗಿಂತ ಪೂರ್ವದ ಕವಿಗಳೆಲ್ಲ ಪ್ರಚಲಿತಗೊಳಿಸಿದ ಎಲ್ಲಾ ಛಂದೋರೂಪಗಳನ್ನು ತನ್ನ ಕೃತಿಗಳಲ್ಲಿ ಬಳಸಿಕೊಂಡು ಪ್ರಯೋಗಶೀಲತೆಯನ್ನು ಸಾಧಿಸಿ ಮೆರೆದಿದ್ದಾರೆ. ಇವರ ತತ್ವಪದಗಳ ಜೊತೆ ಜೊತೆಗೆ ಲಾವಣಿ, ಸೋಬಾನಪದ, ಜೋಗುಳ ಪದಗಳನ್ನು ರಚಿಸಿದ್ದಾರೆ. ಇವರ ಸಮಗ್ರ ಸಾಹಿತ್ಯದಲ್ಲಿ ಲೋಕೋಕ್ತಿ ವಿಚಾರಗಳನ್ನು ನೋಡಬಹುದಾಗಿದೆ. ಈ ಕವಿಯು ಬಹುಭಾಷಾ ಪಂಡಿತರು ಹೌದು. ಕನ್ನಡ, ಸಂಸ್ಕೃತ, ತೆಲುಗು, ಮರಾಠಿ ಮುಂತಾದ ಭಾಷೆಗಳನ್ನು ಸ್ಪಷ್ಟವಾಗಿ ಬಲ್ಲವರಾಗಿದ್ದಾರೆಂದು ತಿಳಿದು ಬರುತ್ತದೆ.

ಗುರುಭಕ್ತಿ, ಆಧ್ಯಾತ್ಮಿಕತೆ, ಮಾಯಾಮೋಹದ ವ್ಯಾಮೋಹ, ಅರಿವು ಇವರ ತತ್ವಪದಗಳ ವಿಶಿಷ್ಟ ಗುಣಗಳಾಗಿವೆ. ಬದುಕಿನ ಕುರಿತು ಹೀಗೆ ನುಡಿದಿದ್ದಾನೆ;

***"ಮೂರೇ ದಿವಸದ ಸಂತಿಯಿದು ನೀ***
***ಮುಖ್ಯ ವಿಚಾರಿಸಿ ನೋಡಣ್ಣ***
***ತೋರಿಯಡಗುವ ಲೋಕವನರಿದು***
***ತೊಳಲುವದಿನ್ಯಾಕಣ್ಣ"***

ಈ ತತ್ವ ಪದದ ಮುಖ್ಯ ಆಶಯವೆಂದರೆ ಈ ಬದುಕು ಕ್ಷಣಿಕ, ಇಲ್ಲಿ ನಾವು ಸಂತೆಗೆ ಬಂದ ವರ್ತಕರಂತೆ, ಯಾರೊಂದಿಗೂ ವಿರಸ ಮಾಡಿಕೊಳ್ಳದೆ, ಮೇಲುಕೀಳು ಎಂಬ ಕಲ್ಪನೆಯಲ್ಲಿ ತೊಳಲಾಡದೆ ಎಲ್ಲರೊಂದಿಗೆ ಬೆರತು ಬಾಳುವ ಬದುಕು ನಮ್ಮದಾಗಬೇಕೆಂಬ ಆಶಾ ಮನೋಭಾವನೆಯನ್ನು ಹೊತ್ತು ನಿಂತಿರುವುದು ಕಾಣಬಹುದಾಗಿದೆ. ಮತ್ತೊಂದು ಹಾಡು ವೈಶಿಷ್ಟ್ಯಪೂರ್ಣವಾಗಿದೆ. ಅದು ಹೀಗೆ ಪ್ರಾರಂಭವಾಗುತ್ತದೆ;

***"ಹೆತ್ತ ತಾಯಿಯೇ ಮಗನ ಹಿಸುಕುವನೆಂದರೆ ಬಾಳ್ವದೆಂತು***
***ಬಿತ್ತಿದ ಹೊಲವುನೆ ಬೇಲಿಯು ಮೆಯ್ದರೆ ಬಾಳ್ವದೆಂತು***
***ಮುತ್ತಿದ ಮಿನ್ನೀರು ಮೇರೆದಪ್ಪಿದರೆ ಬಾಳ್ವದೆಂತು***
***ಬಿತ್ತರದ ಆಗಸ ಬಿದ್ದರೆ ಜಗದೊಳು ಬಾಳ್ವದೆಂತು"***

ನಾವು ಯಾರನ್ನು "ರಕ್ಷಕರೆಂದು ಪರಿಗಣಿಸುತ್ತೇವೆಯೋ ಅವರೇ ಭಕ್ಷಕರಾದರೆ, ಶ್ರೀ ಸಾಮಾನ್ಯರ ಪರಿಸ್ಥಿತಿಯೇನು? ನಾವು ಯಾವ ಮೌಲ್ಯಗಳು ಒಳ್ಳೆಯವು ಎಂದು ನಂಬಿದೆವೋ ಅವೇ ನಮ್ಮ ನಾಶಕ್ಕೆ ಕಾರಣವಾದರೆ, ನಮ್ಮ ಬದುಕು ದುರಂತದ ಅಂಚಿನಲ್ಲಿರುತ್ತದೆಂಬುದಕ್ಕೆ ಕವಿ ನೀಡುವ ಉಪಮೇಯವೆಂದರೆ ಬಿತ್ತರದ ಆಗಸ ಬಿದ್ದರೆ ಜಗದೊಳು ಬಾಳ್ವದೆಂತು.

***"ಅನ್ಯಾಯದಿಂದಾಳುವರಸನ ರಾಜ್ಯವು ಬಾಳ್ವದೆಂತು***
***ಮಾನ್ಯವಿಲ್ಲದವನಾಳಿಕೆಯೋಳು ಸುಜನ ಬಾಳ್ವದೆಂತು"***

ಇಲ್ಲಿ ಅನ್ಯಾಯದ ವಿರುದ್ಧ ತೀವ್ರವಾದ ಆಕ್ರೋಶವಿದೆ. ಜನತೆಯ ಮೇಲೆ ಅನ್ಯಾಯದಿಂದ ಆಡಳಿತ ನಡೆಸುವ ರಾಜ್ಯವು ಬಾಳುವುದಿಲ್ಲ, ಅದು ಒಂದಿಲ್ಲ ಒಂದು ದಿನ ಅವನತಿಯ ದಾರಿಯನ್ನು ಹಿಡಿಯುತ್ತದೆಂದು ತಿಳಿಸುತ್ತಾನೆ. ಅನ್ಯಾಯದಿಂದ ಆಡಳಿತ ನಡೆಸುವ ರಾಜನ ಆಡಳಿತದಲ್ಲಿ ಒಳ್ಳೆಯ ಜನ ಬದುಕಲು ಸಾಧ್ಯವೇ ಎಂಬುದನ್ನು ಕುರಿತು ಆಲೋಚನಾ ಲಹರಿಯನ್ನು ಹರಿಸಿದ್ದಾನೆ.

ಇವರ ಪ್ರಾರ್ಥನಾ ಪರವಾದ ಹಾಡುಗಳಲ್ಲಿ ಘೋರ ಸಂಸಾರವೆಂಬ ಗೊಂಡಾರಣ್ಯದೊಳು ದಾರಿ ತಪ್ಪಿದ ಎಳೆಯ ಹುಲ್ಲೆಯಂತೆ ತಳಮಳಿಸುವ ಭಕ್ತನೊಬ್ಬನ ಅಂತರಂಗದ ಕೂಗು ಮಾರ್ದನಿಯಾಗಿದೆ ಎಂಬುದಕ್ಕೆ ಈ ಕೆಳಗಿನ ಪದ್ಯವನ್ನು ನೋಡಬಹುದು. 'ರೋಷ ವಿಷಯಾತುರದ ರೋಗ ದುಃಖ ಭರದ ಹೇಸಿ ಸಂಸ್ಕೃತಿಯಿಂದೆ ಹೆದರಿ ನೊಂದೆನು ತಂದೆ' ಎಂದು ನೊಂದು ನುಡಿಯುತ್ತಾನೆ;

***"ಕಾಮದಿ ಷಡ್ವರ್ಗಗಳು ದುಷ್ಟ***
***ತಾಮಸಾದಿ ಅಷ್ಟ ದಂತಿಗಳು***
***ಜೊಮ್ಮಿಸುವವನ್ನೊಳಗೆ ಜೊಂಗುಳಿ ಗೊಳಿಸುತೀಗೆ***
***ಸಾಮಾನ್ಯ ಗುಣವಳಿದು ಸದ್ಗುಷಂಗಳ ಕಳೆದು"***

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಹಾಗೂ ಅಷ್ಟ ಮದಗಳೆಂಬ ಬಲವಾದ ಆನೆಗಳನ್ನು ಕಟ್ಟಿ ಕನ್ನಡಿಯಲ್ಲಿರಿಸಿಕೊಳ್ಳವಂತೆ ಪ್ರಾಣಲಿಂಗೇಶನನ್ನು ಪ್ರಾರ್ಥಿಸುತ್ತಾನೆ.

***"ತೆರೆಹಿಲ್ಲದ ಜನ್ಮ ತೆರೆಯೊಳು***
***ತಿರುಗಿ ಬಾಡಿ ಬಳಲಿ ಅಳಲಿ***
***ದುರಹಂಕಾರ ಗತಿ ದುರ್ಗತಿ***
***ಶರದಿ ಕಿಚ್ಚಿನಿಂದೆ ಬೆಂದೆ***
***ಪರಮ ದುಃಖದ ಭಯ ಪರಿಮೋಹಾತುರ***
***ಪರಪದಂತದೇಳು ಪೊರಳಿ ನರಳಿ ಬಾ***
***ಯ್ದೆರೆದು ಪರವಶದೊಳರಗಿ ಮರೆದವನ***
***ಕರವ ಪಿಡಿದೆಳೆದು ಪೊರೆಯೊಳಿರಿಸು"***

ಎಂಬುದಾಗಿ ಜನ್ಮ ಜನ್ಮಾಂತರಗಳಲ್ಲಿ ತಿರುಗಿ ತಿರುಗಿ ಬಸವಳಿವ ಆತ್ಮನಿಗೆ ಅಂಟಿಕೊಂಡಿರುವ ದುಃಖ, ಭಯ, ಮೋಹ, ಆತುರ, ಅಹಂಕಾರಗಳನ್ನು ಬಿಡಿಸಿ ಮುಕ್ತಿಯನ್ನು ಕರುಣಿಸುವಂತೆ ಗುರುವಿನ ಮೊರೆ ಹೋಗುತ್ತಾನೆ.

***"ಗುರುವೆ ನೋಡು ನಿತ್ಯ ಘೋರ***
***ತರ ಭವಾಬ್ಧಿಯೊಳು ತಲ್ಲಣಿಸುವನ***
***ಅಷ್ಟಮದಗಳೆಂಬ ಆನೆ ಗ***
***ಳಟ್ಟಿ ಬರುವನೀಗ ಬೇಗ***
***ನಷ್ಟ ಗುಣಗಳೆಂಬ ನೆಗಳುಗ***
***ಳಟ್ಟುಳಿಯದೆ ಕಂದಿ ಕುಂದಿ***
***ದುಷ್ಟ ವ್ಯಸನಕ್ಕಿಟ್ಟು ಪುಷ್ಟ ಷಡರಿ ಶುನಿ***
***ಚಷ್ಟ ಬುದ್ಧಿಯರ್ಕ ರುಜ ಕರ್ಕಟ***
***ಭ್ರಷ್ಟ ಕೋಪ ಪೃಥು ಪುಷ್ಪಮಡದಿ***
***ಸಂದಷ್ಟ ಮಾಗಲತಿ ಕಷ್ಟ ಬಡುವವನ (ಗುರುವೆ ನೋಡು)"***

ಗುರುವೆನೋಡು, ಕೈಹಿಡಿದು ಕಾಪಾಡು ಎಂದು ಮೊರೆಯಿಡುತ್ತಾನೆ. ಕವಿಗೆ ಸುತ್ತಿಕೊಂಡ ಸಂಸಾರದ ಕಲುಷ ಪಾಶವನ್ನು ಕಡಿಯಲಾಗದೆ, ಮೋಹದ ಮೊಳಕೆಯನ್ನು ಕೀಳಲಾಗದೇ ಭವ ಬಾಧೆ ಪಡಲಾರೆನು ಎಂದು ಹೀಗೆ ನುಡಿಯುತ್ತಾರೆ;

***"ಸಂಸಾರ ಸುಖವದು ಜೇನಿಗೆ ಸಮನಾಗಿ ಜೇನೊಳು***
***ಸಿಲ್ಕಿದ ನೊಣದ ಪರಿಯಾಗಿ ॥1॥***
***ಭವರೋಗ ಬಡತನ ಮತ್ತೆ ಮಹಾವ್ಯಾಧಿಗಳು ಅಜ್ಞಾನ***
***ಕತ್ತಲು ಸುತ್ತುಗಟ್ಟಿತೊ ದೇವಾ***
***(ಭವಬಾಧೆಪಡಲಾರೆನೊ) ॥2॥***

ಎಂದು ಪರಿಪರಿಯಾಗಿ ಪರಿತಪ್ಪಿಸುತ್ತಾನೆ. ಸಂಸಾರ ಸುಖವು ಜೇನಿಗೆ ಸಮನಾದರೆ ಮಾನವನನ್ನು ಅದರ ಸವಿಗೆ ಆಸೆಪಟ್ಟು ಸಿಲುಕಿಕೊಳ್ಳುವ ನೊಣಕ್ಕೆ ಹೋಲಿಸಿದ್ದಾನೆ. ಆಸೆ ಪಟ್ಟು ಫಾಸಿಗೊಳಗಾಗುವ ಮನವನ್ನು ಭವ ರೋಗದಿಂದ ಮುಕ್ತಗೊಳಿಸುವಂತೆ ಗುರುವಿನಲ್ಲಿ ಪ್ರಾರ್ಥಿಸುವನು.

***"ಕಡಲೊಳುದಿಸಿದ ಅಗ್ನಿ ಕಡಲು ನುಂಗುವ ತೆರದಿ***
***ಗಿಡದೊಳುದಿಸಿ ಕಚ್ಚು ಗಿಡವ ಸುಡುವಂತೆ***
***ಒಡಹುಟ್ಟಿದನುಜರನು ಹೀನೈಸಲೆಂಬಂತೆ***
***ಎನ್ನ ಮನವೆನ್ನ ಸುಡುತಲಿಹುದು***
***ಓಡ್ಯಾಡುವ ಮನಸು ತಡೆಹಿಡಿಯಲಾರೆ***
***ತಡ ಮಾಡದಲೆ ದಡಕೆ ಸೇರಿಸೊ । ಒಡೆಯ***
***ನಾ ನಿಮ್ಮ ನಂಬಿದೆ (ಶೀಶಕಮಲವೃತ)"***

ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತೆ ವ್ಯರ್ಥ ಸಂಸಾರ ಸುಖಕ್ಕೆ ನಾ ಮನಕೊಟ್ಟೆ, ಬಲುಕೆಟ್ಟೆ ಎಂಬುದಾಗಿ ತನ್ನ ಮನೋ ವ್ಯಾಪಾರವನ್ನರುಹುತ್ತಾನೆ. ಕಡಲೊಳು ಹುಟ್ಟಿದಗ್ನಿ ಕಡಲನ್ನೇ ನುಂಗುವಂತೆ, ಒಡಲೊಳು ಹುಟಿದ ಮನವು ಒಡಲ್ವಡೆಯನನ್ನು ತರಿದುರುಳಿಸುತ್ತದೆ.

***"ಸತ್ಯ ಶರಣರೊಲಿದು ನಿತ್ಯನಾಂ ಕೂಡಿರದೆ***
***ಮಿಥ್ಯ ಸುಖಕೆಳಸಿ ನಾಂಕೆಟ್ಟೆ***
***ಭೂತ್ಯನಾಗಿರದೆ ನಾಬಿಟ್ಟೆ ದುಷ್ಟ***
***ಕೃತ್ಯಗಳಿಗಾನು ಮನವಿಟ್ಟೆ (ತಂ ಶಾರಾದಾ)"***

ಕ್ರೂರ ಮನವೆಂಬ ಕಾಂತಾರದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರು ಕ್ರೂರ ಮೃಗಗಳ ಜೊತೆಗೆ ಅಷ್ಟಮದಗಳೆಂಬ ಮದ ಹಸ್ತಿಗಳು, ಜೀವನ ಯಾವ ಮಧ್ಯದಲ್ಲಿ ಅಜ್ಞಾನವೆಂಬ ಕಾಳ ಕತ್ತಲು ಇವೆಲ್ಲವುಗಳ ನಡುವೆ ದಾರಿಕಾಣದೆ ಗೋಳಿಡುವ ಜೀವಾತ್ಮನಲ್ಲಿಗೆ ಪರಮಾತ್ಮನೆಂಬ ಬೇಟೆಗಾರ ಬಂದು ಆರು ಕ್ರೂರ ಮೃಗಗಳನ್ನು ಎಂಟು ಮದ ಹಸ್ತಿಗಳನ್ನು ತರಿದಿಕ್ಕಿ ಹೊರದೂಡಿ ಅವನ ಮನೋಕಾಂತಾರದಲ್ಲಿ ನೆಲೆಗೊಳ್ಳಬೇಕು ಎಂಬ ಅಂಶವನ್ನು ಸ್ಪಷ್ಟಪಡಿಸಿದ್ದಾರೆ.

***"ಮನವೆಂಬ ಕಪಿಯಂಗ ಮನದೊಳಗೆ ಚರಿಸುತ***
***ಘನಚೇಷ್ಟೆಗಳು ತೋರುವುದು ಮೂರು***
***ಯಿನಿದಾದ ಫಲಕೆ ಹಾರುವುದು ಮಲೆದು***
***ತನುವುಬ್ಬಿ ತಾನೆ ಚೀರುವುದು"***

ಮನವೆಂಬ ಮರ್ಕಟನು ಅರಗವೆಂಬ ವನದೊಳಗೆ ಚಲಿಸುತ್ತ ಮಲತ್ರಯಗಳೆಂಬ ಅಣವಮಲ, ಮಾಯಾಮಲ, ಕಾರ್ಮಿಕಮಲ ಮೂರು ಫಲಗಳನ್ನು ಮನವಾರ ಮೇಲಿದ್ದು ಮರೆತು ಮರೆಯುವ ಮುನ್ನ ಅಷ್ಟದಳಗಳನಡರಿ ಸನಲಿದ್ದು ಅಷ್ಟವೆಂಬ ದಿಕ್ಕುಗಳೆಡೆ ನೆಗೆವ ಮುನ್ನ ಗುರುಮಂತ್ರವೆಂಬ ಪಾಶದಿ ಹಿಡಿದು ಹೆಡಮುರಿಕಟ್ಟಿ ತನ್ನ ಪಾದದಡಿಯಲ್ಲಿರಿಸಿ ಕೊಳ್ಳುವಂತೆ ಗುರು ಚನ್ನವೀರೇಶನನ್ನು ಬೇಡಿಕೊಳ್ಳುತ್ತಾನೆ. ಕರಿಬಸವಾಚಾರ್ಯರ ತತ್ವಪದಗಳಲ್ಲಿ ಪ್ರಾರ್ಥನಾ ಪರವಾದ ಹಾಡುಗಳೇ ಅಧಿಕವಾಗಿರುವುದು ಕಂಡು ಬರುತ್ತದೆ. ಹೀಗೆ ಕವಿ ಕರಿಬಸವಾಚಾರ್ಯರು ಒಬ್ಬ ತತ್ವಪದಕಾರರಾಗಿ, ಒಬ್ಬ ಪಂಡಿತನಾಗಿ ಸುಮಾರು 25 ಕೃತಿಗಳನ್ನು ರಚಿಸಿ ಜನಸಾಮಾನ್ಯರಿಗೆ ತನ್ನದೇ ಆದ ಹಿರಿಮೆಯ ಸಾಹಿತ್ಯವನ್ನು ನೀಡಿರುವರು.

**ಕರಿಬಸವೇಶ್ವರ ಶಿವಾಚಾರ್ಯರು**

ಹೊನ್ನಕಿರಣಗಿ ಗ್ರಾಮದ ರಾಚೋಟೇಶ್ವರ ಮಠದ ಸ್ವಾಮಿಗಳಾದ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಜನಿಸಿದ್ದು 1918ರಲ್ಲಿ. ಚಿಂಚೋಳಿ ತಾಲೂಕಿನ ಕೋಡ್ಲಾ ಎನ್ನುವ ಗ್ರಾಮ ಇವರ ಜನ್ಮಸ್ಥಳ, ತಂದೆ ಚಂದ್ರಗುಂಡಯ್ಯ, ತಾಯಿ ಗುಂಡಮ್ಮ. ಚನ್ನವೀರ ಶಿವಾಚಾರ್ಯರು ಸೋಲ್ಲಾಪೂರ ಹೋಟಗಿ ಬಾಲ ತಪಸ್ವಿಗಳು, ಇವರ ನೇತೃತ್ವದಲ್ಲಿ ಆಧ್ಯಾತ್ಮ ವಿಷಯಗಳನ್ನು ಕಲಿತ ಕರಿಬಸವೇಶ್ವರ ಶಿವಾಚಾರ್ಯರು ನೂರಾರು ತತ್ವಪದಗಳನ್ನು ರಚಿಸಿದ್ದಾರೆ. 26 ಭಜನೆ ಪದಗಳನ್ನು ಸಂಗ್ರಹಿಸಿದ ಪುಸ್ತಕವು 1991ರಲ್ಲಿ ಹೊನ್ನಕಿರಣಗಿ ರಾಚೋಟೇಶ್ವರ ಮಠದಿಂದ ಪ್ರಕಟವಾಗಿದೆ. ಇವರ ತತ್ವಪದಗಳಲ್ಲಿ ವೀರಶೈವ ಧರ್ಮದ ಆಧ್ಯಾತ್ಮಿಕ ನೆಲೆ ಬೇರೂರಿರುವುದು ಕಂಡುಬರುತ್ತದೆ.

**ಅಣ್ಣಪ್ಪ ಮಾಸ್ತರ ಸಿಂಧೆ**

1942ರಲ್ಲಿ ಚಿಂಚೋಳಿ ತಾಲೂಕಿನ ಗಾರಂಪಳ್ಳಿ ಗ್ರಾಮದ ತುಕ್ಕಪ್ಪ ಗುಂಡಮ್ಮ ಅವರ ಮಗನಾಗಿ ಅಣ್ಣಪ್ಪ ಜನಿಸಿದರು. ಹತ್ತನೆ ತರಗತಿಯವರೆಗೆ ಓದಿದ ಅಣ್ಣಪ್ಪನು ಸರ್ಕಾರಿ ಪ್ರೌಢಶಾಲೆಯ ಮಾಸ್ತರನಾಗಿ ನೇಮಕಗೊಂಡಿದ್ದರು. ಜಾತಿವ್ಯವಸ್ಥೆ, ಮೂಢನಂಬಿಕೆ, ಸಾಕ್ಷರತೆ, ದೇವರ ಕುರಿತು ತತ್ವಪದಗಳು ರಚನೆಯಾಗಿವೆ. ಸಂಗೀತ, ನಾಟಕ, ಭಜನೆ, ಕೋಲಾಟ, ಡಪ್ಪಿನಾಟ, ದೊಡ್ಡಾಟ ಮುಂತಾದವುಗಳಲ್ಲಿ ಆಸಕ್ತಿ ಹೊಂದಿದ ಅಣ್ಣಪ್ಪ ಮಾಸ್ತರ ಆತ್ಮಪರಮಾತ್ಮ ನೀತಿ ಬೋಧನೆ ಅರಿತವರಾಗಿದ್ದರು. ಹಲವಾರು ತತ್ವಪದಗಳನ್ನು ರಚಿಸಿದರೂ ಅಣ್ಣಪ್ಪನವರ ಹಾಡುಗಳು ಪ್ರಕಟಗೊಂಡಿಲ್ಲ.

**ಶ್ರೀ ರಾಮಯ್ಯ ಸ್ವಾಮಿ ಐನೂಲಿ**

ಶ್ರೀ ರಾಮಯ್ಯ ಸ್ವಾಮಿಯವರು ಸಂಗೀತ ಮನೆತನದಲ್ಲಿ ಹುಟ್ಟಿ ಬೆಳೆದು ಬಂದವರು. ತಾತ ಮುತ್ತಾತರಿಂದಲೂ ಇವರ ಮನೆತನದಲ್ಲಿ ವೀಣೆ, ಪಿಟೀಲು ಮೊದಲಾದ ವಾದ್ಯಗಳನ್ನು ಶಾಸ್ತ್ರೀಯವಾಗಿ ನುಡಿಸಬಲ್ಲ ವಿದ್ವಾಂಸರು ಆಗಿ ಹೋಗಿದ್ದಾರೆ. ಇವರ ತಂದೆಯವರು ಜನಪದಸಂಗೀತ ಕಲಾವಿದರಾಗಿದ್ದರು. ಏಕತಾರಿ ಭಾರಿಸುತ್ತಾ ಅನೇಕ ತತ್ವ ಪದಗಳನ್ನು ಹಾಡುತ್ತಿದ್ದರು. ನಾಟ್ಯಕಲೆ, ಗೀತಗಾಯನ ಪರಂಪರೆಯ ಮನೆತನವಾದ್ದರಿಂದ ರಾಮಯ್ಯ ಸ್ವಮಿಯವರು ಬಾಲ್ಯದಿಂದಲೇ ನಾಟಕಗಳಲ್ಲಿ ಪಾತ್ರ ಮಾಡುವುದು, ರಾಗಬದ್ಧವಾಗಿ ಹಾಡುವುದು, ಹಾಗೂ ತಾಳಬದ್ಧವಾಗಿ ಢೋಲಕ್ ದಮಡಿ ಭಾರಿಸುವ ಕಲೆಯನ್ನು ರೂಢಿಸಿಕೊಂಡಿದ್ದರು. ಬಾಲಕರಿದ್ದಾಗಲೆ ಇವರಲ್ಲಿಯ ಕಲೆಯನ್ನು ಕಂಡು ಅನೇಕ ಹಿರಿಯರು ಮೆಚ್ಚುಗೆ ಮತ್ತು ಪ್ರೋತ್ಸಾಹ ನೀಡಿದರು. ಸ್ವಾಮಿಯವರಿಗೆ ತಾನು ಒಬ್ಬ ಸಂಗೀತಗಾರನಾಗಬೇಕೆಂಬ ಹಾಗೂ ಕಲಾ ಸಾಧಕನಾಗಬೇಕೆಂಬ ದೃಢ ನಿಲುವು ಮೂಡಿ ಬಂದಿತು.

ಮುಂದೆ ಸಂಗೀತ ಕಲಿಯಬೇಕೆಂಬ ಹಂಬಲದಿಂದ ಹತ್ತಾರು ಕಡೆಗಳಿಂದ ಸಂಗೀತ ಕಲಾವಿದರನ್ನು ಪರಿಚಯಿಸಿಕೊಂಡು, ಅವರ ಹಿಂಬಾಲಿಸಿ ಹೋದರು. ಹುಮನಾಬಾದ ತಾಲೂಕಿನ ಮುದನಾಳ ಗ್ರಾಮದ ಶ್ರೀ ನಾಗಯ್ಯ ಸಾಗಾ ಹಾಗೂ ಗಾರಂಪಳ್ಳಿಯ ಶ್ರೀನಾಗಣ್ಣ ಅಗಸರ ಅವರಲ್ಲಿ ಆರಂಭಿಕ ಸಂಗೀತ ಅಭ್ಯಾಸ ಮಾಡಿದರು. ಮುಂದೆ ಸಂಗೀತ ವಿದ್ವಾನರಾದ ಶ್ರೀ ವೀರುಪಾಕ್ಷಯ್ಯ ತಾತನವರ ಹತ್ತಿರ ಸಂಗೀತ ಮಾಡಿ ಹಾರ್ಮೋನಿಯಂ ಬಾರಿಸುವದು, ಹಾಡುವುದು ಕಲಿತುಕೊಂಡರು ಕಾಲಾನುಕ್ರಮದಲ್ಲಿ ಲಘು ಶಾಸ್ತ್ರೀಯ ಗಾಯನದಲ್ಲಿ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಂಡು ವಚನಸಂಗೀತ, ಭಕ್ತಿಸಂಗೀತ, ಭಜನಗೀತೆ, ಗಜಲ್‌ಗಳು ಹಾಗೂ ಉರ್ದುವಿನಲ್ಲಿ ಖವಾಲಿ ಮೊದಲಾದ ಗೀತೆಗಳಿಗೆ ರಾಗಸಂಯೋಜನೆ ಮಾಡಿ ತಮ್ಮದೇ ಆದ ಧಾಟಿಯಲ್ಲಿ ಹಾಡಿ ಜನಪ್ರಿಯತೆಯನ್ನು ಪಡೆದುಕೊಂಡಿದ್ದಾರೆ. ನೂರಾರು ಆಧುನಿಕ ಸ್ವರವಚನಗಳನ್ನು ರಚಿಸಿದ್ದಾರೆ.

ಲಘು ಶಾಸ್ತ್ರೀಯ, ಸುಗಮ ಸಂಗೀತ ಹಾಗೂ ಜನಪದ ಸಂಗೀತ ಈ ಮೂರು ಪ್ರಕಾರಗಳಲ್ಲಿ ಸಾಕಷ್ಟು ಪಾಂಡಿತ್ಯ ಗಳಿಸಿದ ಇವರು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಮೊದಲಾದ ರಾಜ್ಯಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇಲಾಖೆಗಳ ನಿಯೋಜಿತ ಕಲಾವಿದರಾಗಿ ಅನೇಕ ಕಡೆಗಳಲ್ಲಿ ಮುಖ್ಯ ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಆಕಾಶವಾಣಿ ಜನಪದ ಸಂಗೀತ ಕಾರ್ಯಕ್ರಮ, ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವ ಮೊದಲಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಕನ್ನಡ ಸಾಹಿತ್ಯ ಪರಷತ್ತು, ಲಿಂಗವಂತ ತತ್ವ ಪ್ರಚಾರ ಸಂಸ್ಥೆಗಳುನಡೆಸಿದ ಅನೇಕ ಕಾರ್ಯಕ್ರಮಗಳಲ್ಲಿ ಹಾಡಿ ಜನಮೆಚ್ಚಿಗೆ ಗಳಿಸಿದ್ದಾರೆ.

ತತ್ವಪದಗಳನ್ನು, ತತ್ವಪದಕಾರರನ್ನು ಅರಿತುಕೊಳ್ಳುವುದೆಂದರೆ ನಮ್ಮನ್ನು ನಾವು ಕಂಡುಕೊಳ್ಳುವ, ನಾವು ಯಾರು ಎಂದು ಹುಡುಕಿಕೊಳ್ಳುವ ಹುಡುಕಾಟ. ಈಗ ನಾವು ಯಾರು ಎಂಬುದನ್ನು ಸಾಬೀತು ಪಡಿಸಲೇಬೇಕಾಗಿರುವುದರಿಂದ ಹುಡುಕಾಟ ಅನಿವಾರ್ಯ. ಕರ್ನಾಟಕ ಸುಗಮ ಸಂಗೀತ ಕಲಾವಿದರೆಂದು ಗುರುತಿಸಿಕೊಂಡ ರಾಮಯ್ಯ ಸ್ವಾಮಿಯವರು ಸಂಗೀತದ ಸಾಧನೆಯ ಜೊತೆಗೆ ಆರಂಭದಲ್ಲಿ ಜನಪದ ರಂಗಭೂಮಿ ನಿರ್ದೇಶಕರಾಗಿ ತಮ್ಮ ಸ್ವಗ್ರಾಮದಲ್ಲಿ ಕೋಲಾಟ, ದೊಡ್ಡಾಟಗಳನ್ನು ನಿರ್ದೇಶನ ಮಾಡಿರುವರು. ದೊಡ್ಡಾಟಗಳಲ್ಲಿ ಮೃದಂಗ ಬಾರಿಸುವದರಲ್ಲಿ ಎತ್ತಿದಕೈ. ಅಲ್ಲದೆ ಹವ್ಯಾಸಿ ರಂಗಭೂಮಿ ಕಲಾವಿದರಾಗಿ ಹಲವಾರು ನಾಟಕಗಳನ್ನು ನಿರ್ದೇಶನ ಮಾಡಿ ಸಾಧನೆಗೈದಿದ್ದಾರೆ. ಜೊತೆಗೆ ಇವರು ಸಾಹಿತ್ಯ ಕೃಷಿಯಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡು ಅನೇಕ ಭಕ್ತಿಗೀತೆ, ಭಾವಗೀತೆ ಹಾಗೂ ಅನೇಕ ಲೇಖನಗಳನ್ನು ಬರೆದಿದ್ದಾರೆ.

**ಉಪಸಂಹಾರ**

ತತ್ವಪದಕಾರರ ಮಾರ್ಗ ಭಕ್ತಿ ಪಥವೂ ಅಲ್ಲ; ದೈವ ಪಥವೂ ಅಲ್ಲ: ಅಧ್ಯಾತ್ಮವೂ ಅಲ್ಲ. ಜಾತಿ–ಧರ್ಮದಂತಹ ಸೀಮಿತ ಹಂಗುಗಳನ್ನು ಮೀರಿದ ಬದುಕಿನ ಚಿಂತನಾ ಕ್ರಮವಾಗಿದೆ. ಭಾರತೀಯ ಸಾಹಿತ್ಯದಲ್ಲಿ ತತ್ವಪದಗಳ ಹಾಗೂ ತತ್ವಪದಕಾರರ ಬಹು ದೊಡ್ಡ ಪರಂಪರೆಯೇ ಇದೆ. ಅದು ಸಾಂಸ್ಕೃತಿಕ ಸಿರಿವಂತಿಕೆಯಿಂದ ಸಮೃದ್ಧವಾಗಿದೆ. ಆದರೆ, ಇಂತಹ ಪರೊಂಪರೆಯೊಂದರ ಶಿಸ್ತಿನ ಅಧ್ಯಯನವಾಗಿರುವುದು ಕಡಿಮೆ. ತತ್ವಪದಗಳನ್ನು, ತತ್ವಪದಕಾರರನ್ನು ಅರಿತುಕೊಳ್ಳುವುದೆಂದರೆ ನಮ್ಮನ್ನು ನಾವು ಕಂಡುಕೊಳ್ಳುವ, ನಾವು ಯಾರು ಎಂದು ಹುಡುಕಿಕೊಳ್ಳುವ ಹುಡುಕಾಟವೆಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**


- ಬಸವರಾಜ ಸಬರದ. (1996). *ಗುಲ್ಬರ್ಗಾ ಜಿಲ್ಲೆಯ ಅನುಭಾವಿ ಕವಿಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಬಸವರಾಜ ಸಬರದ. (2000). *ಹೈದರಾಬಾದ ಕರ್ನಾಟಕ ತತ್ವಪದಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

- ಲಿಂಗಾರೆಡ್ಡಿ ಶೇರಿ. (1983). *ನಿತ್ಯಾನಂದ ತತ್ವಪದಗಳು.* ಬಸವ ಪ್ರಕಾಶನ.
- ಪಂಚಾಕ್ಷರಿ, ಬಿ. ಪೂಜಾರಿ. (2015). *ತತ್ವಪದ ಸಂಪದ.* ಶ್ರೀ ದಂಡಗುಂಡ ಬಸವೇಶ್ವರ ದೇವಸ್ಥಾನ ಪೂಜಾರಿಗಳು.
- ವಿಜಯಶ್ರೀ ಸಬರದ. (1997). *ಗುರುಶಿಷ್ಯರ ತತ್ವಪದಗಳು.* ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.